

ಸಾಧ್ಯವಾದೀತೇ ನನಗೆ.. ಎಂತಹ ಒಳ್ಳೆಯ ಹುಡುಗಿ. ಗಟ್ಟಿಯಾಗಿ ಒಂದು ಮಾತೂ ಆಡಲು ಬರದವಳು.. ಅದು ಹೇಗೆ ಇಂತಹ ಹೀನ ಕೆಲಸಕ್ಕೆ ಕೈ ಹಾಕಿದಳು..

ತಮ್ಮ ಮುಂದುವರಿಸಿದ್ದ..'ನಮಗೇನೂ ಲಾಭವಿಲ್ಲ. ಆದರೂ ನಮ್ಮ ಅನುಮಾನ ಬಗೆಹರಿಸಿಕೊಳ್ಳುವ ಸಲುವಾಗಿಯಾದರೂ.' ಶಂಕರನಿಗೂ ಸರಿಯೆನಿಸಿತ್ತು.

ಆಕೆಯನ್ನು ರೂಮಿಗೇ ಕರೆದಿದ್ದ. ಅಪ್ಪನ ಕಾರ್ಯದ ಎಲ್ಲ ದಿನಗಳಲ್ಲೂ ಕಂಗೆಟ್ಟವಳಂತೆ ಓಡಾಡುತ್ತಿದ್ದ ಆಕೆ ಈಗ ಅಣ್ಣ ತಮ್ಮಂದಿರು ಒಟ್ಟಿಗೇ ಇದ್ದಾಗ ಕರೆದಿದ್ದುದರಿಂದ ಇನ್ನಷ್ಟು ಕಂಗಾಲಾಗಿದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಒಳ ಬಂದ ಆಕೆ ಅಳುತ್ತಲೇ ಗಂಡನ ಕಾಲು ಹಿಡಿದಿದ್ದಳು. ಅಣ್ಣ ತಮ್ಮಂದಿರ ಸಂಶಯ ದೃಢಪಟ್ಟಿತ್ತು. ಆಕೆಯನ್ನು ತವರಿಗೆ ಕಳುಹಿಸಬೇಕೆಂಬ ಶಂಕರನ ತೀರ್ಮಾನವೂ ಬಲವಾಗುತ್ತಿತ್ತು.

'ನನ್ನನ್ನು ಕ್ಷಮಿಸಿ. ನಾನು ಎಂದೋ ಹೇಳಬೇಕಿತ್ತು ನಿಮಗೆ. ತಪ್ಪು ಮಾಡಿದೆ..' ಅಳುವಿನ ದನಿಯಲ್ಲೂ ಆಶ್ಚರ್ಯ ಹುಟ್ಟಿಸುವ ದೃಢತೆಯಿತ್ತು. ಅಣ್ಣ ತಮ್ಮಂದಿರಿಬ್ಬರಿಗೂ ಬಂದದ್ದು ಬರಲಿ ಎನ್ನುವ ಭಂಡತನವೇ ಕಂಡಿತ್ತು ಆ ದನಿಯಲ್ಲಿ.

'ತಪ್ಪು ನನ್ನದೇ. ಎಂದೋ ಹೇಳಬೇಕಿತ್ತು ನಾನು. ಹೇಳಲಿಲ್ಲ. ದೇವರಂತಹ ವರೆಂದು ನೀವೇ ಹೇಳುತ್ತಿದ್ದ ಮಾವನ ಬಗ್ಗೆ ಹೇಗೆ ದೂರು ಹೇಳಿ. ಆ ದೇವರಲ್ಲಿ ಒಬ್ಬ ದಾನವ ನನಗೆ ಮಾತ್ರ ಕಾಣಿಸುತ್ತಿದ್ದ ಎಂದು ಹೇಗೆ ಹೇಳಲು ಸಾಧ್ಯವಿತ್ತು ನನಗೆ..' ನಡು ನಡುವೆ ಅಳು ಧ್ವನಿಯನ್ನು ತಡೆಯುತ್ತಿತ್ತು.

'ನಾನೇ ನುಂಗಿಕೊಂಡೆ. ಅವರ ಅನಾಚಾರವನ್ನೆಲ್ಲ ಸಹಿಸಿಕೊಂಡೆ' ಕೇಳಿಸಿಕೊಂಡ ಅಣ್ಣ ತಮ್ಮಂದಿರಿಗಿಬ್ಬರಿಗೂ ಆಘಾತ.

'ಬೆಳಿಗ್ಗೆ ಎದ್ದು ತೋಟಕ್ಕೆ ಹೋಗುತ್ತಿದ್ದ ಮಾವ ಏನೇನೋ ಹೆಳಿ ಹೇಳಿಕೊಂಡು ನಡುವಿನಲ್ಲಿಯೇ ಮನೆಗೆ ಬರುವವರು. ಅದೂ ನಾನು ಸ್ನಾನಕ್ಕಿಳಿಯುವ ಹೊತ್ತಿಗೇ. ಹಾಗೆ ಬಂದವರು ಯಾರಿಗೂ ಅನುಮಾನ ಬರದ ಹಾಗೆ ಬಚ್ಚಲಿನ ಬಾಗಿಲಿನ ತೂತಿನಲ್ಲಿ ಇಣುಕುತ್ತ ಇರೋವರು. ನನಗೆ ಮೊದ ಮೊದಲು ಗೊತ್ತಾಗಲಿಲ್ಲ. ಅಲ್ಲ ಅವರಂಥವರ ಬಗ್ಗೆ ಅನುಮಾನಪಡುವುದಾದರೂ ಹೇಗೆ?. ನನಗೆ ಅನುಮಾನ ಬಂದಿದೆಯೆಂದು ತೋರಿಸಿ ಕೊಳ್ಳುವ ಹಾಗೆಯೂ ಇರಲಿಲ್ಲ. ಆದರೂ ಒಮ್ಮೆ ಪರೀಕ್ಷಿಸಿಯೇ ಬಿಡೋಣ ಎಂದು ಅರ್ಧ ಸ್ನಾನ ಮಾಡಿದವಳು ಹಾಗೆಯೇ ಮೈ ತುಂಬ ಸೀರೆ ಸುತ್ತಿಕೊಂಡು 'ರಾಮಕ್ಕಾ..' ಎಂದು ಕರೆಯುತ್ತ ಬಾಗಿಲು ತೆರೆದರೆ ಮಾವ ಬಾಗಿಲೆದುರು ಬೆಪ್ಪುಕಟ್ಟಿ ನಿಂತಿದ್ದರು. ಕೇಳಿದರೆ ನೀರು ಕುಡಿಯಲೆಂದು ಬಂದೆ. ಕಾಲೆಲ್ಲ ಕೆಸರಾಗಿತ್ತು ತೊಳೆದುಕೊಳ್ಳುವ ಎಂದು ಬಚ್ಚಲಿಗೆ ಬರುತ್ತಿದ್ದೆ' ಎಂದಿದ್ದರು ತೊದಲುತ್ತ.

'ಆದರೆ ಅದು ಅಷ್ಟಕ್ಕೇ ನಿಲ್ಲಲಿಲ್ಲ. ಆಗಿಂದಾಗ್ಗೆ ನಿಮ್ಮನ್ನು ಶಿವಮೊಗ್ಗಕ್ಕೆ ಕೆಲಸದ ಮೇಲೆ ಕಳುಹಿಸುತ್ತಿದ್ದವರು ಏನಾದರೂ ಮಾಡಿ ನೀವು ರಾತ್ರಿ ಅಲ್ಲೇ ಉಳಿಯು ವಂತೆ ಮಾಡುತ್ತಿದ್ದರು. ಅಂತಹ ರಾತ್ರಿಗಳಲ್ಲಿ ತುಂಬ ತೊಂದರೆ ಕೊಡುತ್ತಿದ್ದರು. ಅಡುಗೆ ರಾಮಕ್ಕನ ಕಣ್ಣು ತಪ್ಪಿಸಿ ಅಡುಗೆ ಮನೆಗೆ ಬರೋವರು. ಸುಮ್ಮ ಸುಮ್ಮನೆ ನನಗೆ ಸಹಾಯ ಮಾಡುವವರ ಹಾಗೆ ಮೈ ಕೈ ಮುಟ್ಟು ವವರು. ಒಮ್ಮೆ ಯಂತೂ ನಮ್ಮ ಕೋಣೆಯೊಳಗೂ ಬಂದಿದ್ದರು. ಬೇಡ ಮಾವ. ನೀವು ನನಗೆ ತಂದೆಯ ಸಮಾನ. ದೇವರು ಇದ್ದ ಹಾಗೆ. ಎಂದರೆ 'ಅದೆಲ್ಲ ಇರಲಿ ಪ್ರಮೀಳ. ಆ ದೇವರುಗಳಿಗೂ ಹೆಂಗಸರ ಅಗತ್ಯ ಇತ್ತಲ್ಲವೇ. ಹೇಳಿ ಕೇಳಿ ನಾನು ಒಬ್ಬ ಸಾಮಾನ್ಯ ಮನುಷ್ಯ.. ಎನ್ನುತ್ತ ಮುಂದೆ ಬಂದಿದ್ದರು. ಬಾಯಿಯಿಂದ ಹೊಲಸು ಮಾತು ಗಳು ಮಾತ್ರವಲ್ಲ. ಹೊಲಸು ವಾಸನೆಯೂ ಬರುತ್ತಿತ್ತು. ಬಹುಶಃ ನೀವು ಮನೆ ಯಲ್ಲಿಲ್ಲದ ದಿನಗಳಲ್ಲಿ ಕುಡಿಯುತ್ತಿದ್ದರು ಎಂದು ಕಾಣುತ್ತದೆ. ನಾನಂತೂ ನೀವಿಲ್ಲದ ದಿನಗಳಲ್ಲಿ ರೂಮಿನ ಬಾಗಿಲನ್ನು ಒಳಗಡೆಯಿಂದ ಭದ್ರಪಡಿಸಿ ಕೊಂಡು ಮಲಗಲು ತೊಡಗಿದೆ..' ಅಣ್ಣ ತಮ್ಮಂದಿರಿಬ್ಬರೂ ಉಸಿರುಗಟ್ಟಿ ಕೇಳುತ್ತಿದ್ದರು. ನಂಬಲಿಕ್ಕೇ ಸಾಧ್ಯವಿಲ್ಲ. ಆದರೂ ನಂಬಬೇಕು. ಅಪ್ಪನ ಬಗ್ಗೆ ಆ ಮಾತುಗಳನ್ನು ಹೇಳುತ್ತಿದ್ದವಳು ಪ್ರಮೀಳ. ಬೇರೆ ಯಾರ ಬಾಯಿ ಯಲ್ಲಾದರೂ ಇಂತಹ ಮಾತು ಬಂದಿದ್ದರೆ ಅದರ ಕತೆಯೇ ಬೇರೆ ಇರುತ್ತಿತ್ತು.

ಶಂಕರನ ತೊಳಲಾಟ ಮುಖದ ಮೇಲೆ ಪ್ರಕಟವಾಗಿಯೇ ಕಾಣತೊಡಗಿದಾಗ ಅದೆಲ್ಲಿಯಾದರೂ ಮಾತಿನ ರೂಪ ಪಡೆದೀತೇನೋ ಎಂದು ಹೆದರಿದ ಚಂದ್ರು ಅವನ ತೊಡೆ ತಟ್ಟಿ ಸುಮ್ಮನಿರಿಸಿದ್ದ. ಅತ್ತಿಗೆ ಹೇಳುತ್ತಿದ್ದುದು ಅವನಿಗೆ ಸುಳ್ಳಾಗಿ ಕಂಡಿರಲಿಲ್ಲ.

ಪ್ರಮೀಳ ಮುಂದುವರಿಸಿದ್ದಳು. 'ನನಗೂ ಸಾಕಾಗಿತ್ತು. ನಿಮ್ಮೊಡನೆ ಹೇಳುವ ಎಂದರೆ ನಿಮಗೋ ಅವರ ಬಗ್ಗೆ ಅದೆಷ್ಟು ಗೌರವ, ಪ್ರೀತಿ! ನಾನು ಹೇಗೆ ದೂರಲಿ ಅವರನ್ನು. ಅದೂ ಅಷ್ಟು ಚಂದದಲ್ಲಿದ್ದ ತಂದೆ ಮಕ್ಕಳನ್ನು ಹೇಗೆ ದೂರ ಮಾಡಲಿ ಎಂದು ಸಾಧ್ಯವಾದಷ್ಟು ನುಂಗಿದೆ. ಇನ್ನು ಸಾಧ್ಯವೇ ಇಲ್ಲ ಎಂದಾದಾಗ... ಬೇರೆ ಏನು ಮಾಡಲಿ ಹೇಳಿ. ನಾನು ಇದ್ದುದರಿಂದ ತಾನೇ ಈ ತೊಂದರೆ... ನಾನೇ ಇಲ್ಲವಾದರೆ... ಅದಕ್ಕೇ ಮೇಸ್ತ್ರಿಯ ಹತ್ತಿರ ಇಲಿ ಹೆಚ್ಚಾಗಿದೆಯೆಂದು ಹೇಳಿ ವಿಷ ತರಿಸಿಕೊಂಡೆ. ಮಾವ ನಿಮ್ಮನ್ನು ಶಿವಮೊಗ್ಗಕ್ಕೆ ಕಳುಹಿಸುವ ದಿನಕ್ಕಾಗಿ ಕಾಯುತ್ತಿದ್ದೆ. ರಾಮಕ್ಕನನ್ನೂ ಮಗಳ ಮನೆಗೆ ಕಳುಹಿಸಿದ್ದು ನನ್ನ ಒಪ್ಪಿಗೆಯೆಂದೇ ಎಣಿಸಿರಲಿಕ್ಕೂ ಸಾಕು. ಮಾವ ಮಾಮೂಲಿಯಂತೆ ಊಟ ಮುಗಿಸಿದ ಅವರು ತಮ್ಮ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಿದ್ದರು. ಅದನ್ನೇ ಕಾಯುತ್ತಿದ್ದ ನಾನು ಅಡುಗೆ ಮನೆಯನ್ನು ಹೊಕ್ಕು ಲೋಟದ ಹಾಲಿಗೆ ವಿಷ ಸುರುವಿಕೊಂಡು ಕುಡಿಯ ಹೊರಟಿದ್ದೆ. ಇನ್ನೇನು ಕುಡಿಯಬೇಕು. ಅಷ್ಟರಲ್ಲಿ ತೇಲಾಡುತ್ತ ಒಳ ಬಂದ ಮಾವ ಆಡಬಾರದಂತಹ ಹೊಲಸು ಮಾತುಗಳನ್ನೆಲ್ಲ ಆಡುತ್ತ ನನ್ನ ಕೈಯಿಂದ ಹಾಲಿನ ಲೋಟವನ್ನು ಕಸಿದುಕೊಂಡು 'ಪ್ರಮೀಳಾ ಎಂತಹ ರುಚಿ ಈ ಹಾಲಿಗೆ... ನೀನೊಬ್ಬಳೇ ಕುಡಿಯುತ್ತಿದ್ದೀಯಲ್ಲ' ಎಂದು ಒಂದೇ ಗುಟುಕಿಗೆ ಇಡೀ ಲೋಟವನ್ನು ಕುಡಿದೇಬಿಟ್ಟರು.

ದಿಗ್ಭ್ರಮೆಯಿಂದ 'ಮಾವ.. ಮಾವ.... ಎನ್ನುತ್ತಿದ್ದ ನನ್ನನ್ನು ಹಿಡಿದುಕೊಳ್ಳಲು ಬಂದಿದ್ದರು. ಏನೂ ಮಾಡಲು ತೋಚಿರಲಿಲ್ಲ ನನಗೆ. ತಪ್ಪಿಸಿಕೊಳ್ಳುವ ಪ್ರಯತ್ನವನ್ನೂ ಮಾಡದೆ ಆಗಲೇ ಮದ್ಯದ ನಶೆಯಿಂದ ತೇಲಾಡುತ್ತ ಬೀಳಲು ತಯಾರಾಗಿದ್ದ ಅವರನ್ನು ಆಧಾರ ಕೊಟ್ಟು ನಿಧಾನವಾಗಿ ನಡೆಸಿಕೊಂಡು ಹೋಗಿ ಅವರ ರೂಮಿನಲ್ಲಿ ಮಲಗಿಸಿಬಿಟ್ಟೆ. ಬಹುಶಃ ನಾನು ಅವರನ್ನು ಒಪ್ಪಿಬಿಟ್ಟೆ ಎನಿಸಿತ್ತೇನೋ. ಅವರೂ ವಿರೋಧ ತೋರಿಸಲಿಲ್ಲ. ಮಗುವಿನಂತೆ ಮಲಗಿಬಿಟ್ಟರು. ಅಲ್ಲಿಂದ ನಾನು ನನ್ನ ರೂಮಿಗೆ ಹೋಗಿ ಬಾಗಿಲು ಭದ್ರಪಡಿಸಿ ಮಲಗಿದೆ. ಇಷ್ಟೇ ನೋಡಿ ನಡೆದದ್ದು. ಈಗ ನೀವಿಬ್ಬರು ಏನು ಶಿಕ್ಷೆ ಕೊಟ್ಟರೂ ನಾನು ಅನುಭವಿಸಲಿಕ್ಕೆ ಸಿದ್ಧ..' ಅಣ್ಣ ತಮ್ಮ ಇಬ್ಬರೂ ಬಿಟ್ಟ ಬಾಯಿ ಬಿಟ್ಟಂತೆ ಕೇಳುತ್ತಲೇ ಇದ್ದರು. ಅಪ್ಪನಲ್ಲಿ ಅಡಗಿದ್ದ ಪಿಶಾಚಿಯೊಂದು ಈ ಮಟ್ಟಕ್ಕೆ ಬೆಳೆದಿತ್ತು ಎನ್ನುವುದನ್ನು ನಂಬಲಿಕ್ಕೇ ಕಷ್ಟವಾಗಿತ್ತು ಅವರಿಬ್ಬರಿಗೆ. ಅಮ್ಮ ಸತ್ತಾಗಲೇ ಮರು ಮದುವೆ ಮಾಡಿ ಕೊಳ್ಳಬಹುದಿತ್ತಲ್ಲ.. ತಮ್ಮಿಬ್ಬರಿಗಾಗಿ ಎಲ್ಲವನ್ನು ತ್ಯಾಗ ಮಾಡಿದ ಅಪ್ಪ ಯಾಕೆ ತಮ್ಮ ಒಳ್ಳೆಯತನವನ್ನು ಈ ತೆರನಲ್ಲಿ ಸಾಯಗೊಟ್ಟರು... ಅಣ್ಣ ತಮ್ಮಂದಿರಿಬ್ಬರ ಮನದಲ್ಲೂ ಗೊಂದಲ.

ಪ್ರಮೀಳ ನಾಟಕ ಮಾಡುತ್ತಿಲ್ಲವಷ್ಟೇ ಎನ್ನುವ ಅನುಮಾನ ಇನ್ನೂ ಕಾಡುತ್ತಿದ್ದಾಗಲೇ ಶಂಕರನ ಮೊಬೈಲ್ ರಿಂಗಾಗಿತ್ತು. ನೋಡಿದರೆ ವಿದೇಶದ ಕರೆ. ಪ್ರಮೀಳೆಯ ಬಾಲ್ಯದ ಗೆಳತಿಯದ್ದು. ಅಮೆರಿಕೆಯಲ್ಲಿ ಗಂಡನೊಂದಿಗೆ ನೆಲೆಸಿದ್ದ ಆಕೆ ಆಗಾಗ್ಗೆ ಫೋನ್ ಮಾಡುತ್ತಲೇ ಇರುತ್ತಾಳೆ. ಈ ಸಲ ಊರಿಗೆ ಬಂದಾಗ ಖಂಡಿತ ಪ್ರಮೀಳಕ್ಕ ಮತ್ತು ಭಾವನನ್ನು ನೋಡಿಯೇ ಹೋಗುತ್ತೇನೆ ಎನ್ನುತ್ತಿದ್ದವಳು. ಉತ್ತರಿಸುವ ಮನಸ್ಸು ಇಲ್ಲದಿದ್ದರೂ ತೆಗೆದುಕೊಂಡಿದ್ದ.

ಉದ್ವೇಗದಿಂದ ಮಾತಾಡುತ್ತಿದ್ದ ಆಕೆ 'ಭಾವಾ..ಪ್ರಮೀಳಕ್ಕನಿಗೆ ಏನಾಯ್ತು.. ಹದಿನೈದು ದಿನಗಳ ಹಿಂದೆ ಅವಳು ಬರೆದ ಕಾಗದ ಇವತ್ತು ಸಿಕ್ಕಿತು ನನಗೆ.. ಅದೇನೋ ಯಾರೊಂದಿಗೂ ಹೇಳಿಕೊಳ್ಳಲಾಗದ ಕಷ್ಟವಂತೆ. ಆವತ್ತೇ ಕೊನೆ. ಇನ್ನು ಸಿಗುವುದಿಲ್ಲ ಎಂದು ಬರೆದಿದ್ದಾಳೆ. ಬದುಕನ್ನೇ ಮುಗಿಸುತ್ತಿದ್ದೇನೆ. ಜೊತೆಯಲ್ಲಿಯೇ ಯಾರಿಗೂ ತಿಳಿಯದ, ತಿಳಿಯಬಾರದ ಗುಟ್ಟೊಂದನ್ನೂ ಕೊಂಡೊಯ್ಯುತ್ತಿದ್ದೇನೆ ಎಂದೂ ಬರೆದಿದ್ದಾಳೆ. ಆ ಗುಟ್ಟು ನನ್ನೊಂದಿಗೇ ಸಾಯಲಿ ಎಂದಿದ್ದಾಳೆ. ಏನಿದು ಭಾವ. ಪ್ರಮೀಳ ಚೆನ್ನಾಗಿದ್ದಾಳೆ ತಾನೇ.. ಅವಳಿಗೇನಾಯ್ತು ಹೇಳಿ ಭಾವ..' ಒಂದೇ ಸವನೆ ಅತ್ತಲಿಂದ ಮಾತಾಡುತ್ತಲೇ ಇದ್ದಳು. ಸ್ಪೀಕರ್ ಆನ್ ಮಾಡಿದ್ದ ಫೋನನ್ನು ಕೇಳಿಸಿಕೊಳ್ಳುತ್ತಿದ್ದ ಚಂದ್ರು ಮರಗಟ್ಟುತ್ತಿದ್ದ. ಪ್ರಮೀಳೆ ಕಣ್ಣೀರಿನ ಧಾರೆಯನ್ನೇ ಹರಿಸುತ್ತಿದ್ದಳು.

'ಏನಿಲ್ಲ... ಏನಿಲ್ಲ... ಅವಳು ಚೆನ್ನಾಗಿಯೇ ಇದ್ದಾಳೆ' ಎನ್ನುವ ಹಾರಿಕೆ ಉತ್ತರ ಕೊಟ್ಟು ಫೋನ್ ಕರೆ ಮುಗಿಸಿದ ಶಂಕರ ಅವಮಾನ ಮತ್ತು ನೋವಿನಿಂದ ನಲುಗಿ ಹೋಗಿದ್ದ ಪ್ರಮೀಳೆಯನ್ನು ಹತ್ತಿರಕ್ಕೆ ಎಳೆದುಕೊಂಡಿದ್ದ. ಚಂದ್ರು ಮಾತ್ರ 'ಅತ್ತಿಗೆ, ನೀವು ನಿಜವಾಗಿಯೂ ದೇವತೆಯೇ' ಎನ್ನುತ್ತ ತನ್ನ ತುಂಬಿ ಬಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಹೊರ ನಡೆದಿದ್ದ.

■